ಪ್ರಥಮ ದರ್ಜೆಯ ನ್ಯಾಯಿಕ ದಂಡಾದಿಕಾರಿಗಳವರ ನ್ಯಾಯಾಲಯ
ಅಫಜಲಪೂರ

ಸಿಸಿ .ನಂ.196/2014

ಚಾಸಾ-2 ಪ್ರಾಸಾ-1

ಪ್ರಮಾಣಿಕೃತ ಹೇಳಿಕೆ ಸತ್ಯ ಪ್ರತಿಜ್ಞೆಯ ಮೇರೆಗೆ
ದಿನಾಂಕ : 04.07.2017

| | | |
|---|---|---|
| ಹೆಸರು | : | ಸಂತೋಷ |
| ತಂದೆಯ ಹೆಸರು | : | ಸಿದ್ರಾಮ ಸಿಂಗೆ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಘತ್ತರಗಾ ಗ್ರಾಮ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ನನಗೆ ಚಾಸಾ-3 ರವರ ಪರಿಚಯವಿದೆ. 4-ವರ್ಷದ ಹಿಂದೆ ಪೋಲಿಸರು ರೇಣುಕಾ ಸಕ್ಕರೆ ಕಾರ್ಖಾನೆಗೆ ಬಂದಿದ್ದರು ಅಲ್ಲಿ ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯ ಮೇಲಿನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಘಟನಾ ಸ್ಥಳದ ಪಂಚನಾಮೆಯಾಗಿರುತ್ತದೆ. ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿ ಪೋಲಿಸರ ಮುಂದೆ ನೀಡಿರುವ ಹೇಳಿಕೆಯನ್ನು ಮತ್ತು ನ್ಯಾಯಾಲಯದ ಮುಂದೆ ನೀಡಿರುವ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಗಿದೆ.)

ಪಾಟೀ ಸವಾಲುಃ ಎಪಿಪಿ ಯವರಿಂದ

ದಿನಾಂಕ 18.12.2010 ರಂದು ಆರೋಪಿತರು ರೇಣುಕಾ ಸಕ್ಕರೆ ಫ್ಯಾಕ್ಟರಿಯಲ್ಲಿ ಸಕ್ಕರೆ ಚೀಲಗಳನ್ನು ಅನಧಿಕೃತವಾಗಿ ಗೋದಾಮಿಗೆ ಸಾಗಿಸದೇ ಬೇರೆ ಕಡೆ ಸಾಗಾಟ ಮಾಡುತ್ತಿದ್ದ ಬಗ್ಗೆ ಪ್ರಕರಣ ಅವರು ಮೇಲೆ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ಚಾಸಾ-1 ರವರು ಸದರಿ ಆರೋಪಿತನ ಹಾಗೂ ಇತರರ ವಿರುದ್ಧ ಹೇಳಿಕೆ ಫಿರ್ಯಾದಿ ನೀಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ದಿನಾಂಕ 23.12.2010 ರಂದು ಬೆಳಿಗ್ಗೆ 9 ರಿಂದ 10.30 ಗಂಟೆಯ ವರೆಗೆ ರೇಣುಕಾ ಸಕ್ಕರೆ ಕಾರ್ಖಾನೆಯಲ್ಲಿ ಚಾಸಾ-9 ರವರು ತೋರಿಸಿದ ಘಟನಾ ಸ್ಥಳದಲ್ಲಿ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಪೋಲಿಸರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದರೆ ಸದರಿ ದಿನ ಪೋಲಿಸರು ಶುಗರ್ ಫ್ಯಾಕ್ಟರಿಗೆ ಬಂದಿದ್ದು ನಮ್ಮ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಗೆ ನಾನು ಪಂಚನಾಮೆ ಮಾಡಿದ ನಂತರ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿಯೇ ಪಂಚನಾಮೆಗೆ ಸಹಿ ಮಾಡಿದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಪಾಟಿ ಸವಾಲುಃ ಇಲ್ಲ

ಮರು ವಿಚಾರಣೆ ಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

## ಪ್ರಥಮ ದರ್ಜೆಯ ನ್ಯಾಯಿಕ ದಂಡಾದಿಕಾರಿಗಳವರ ನ್ಯಾಯಾಲಯ
## ಅಫಜಲಪೂರ

ಸಿಸಿ .ನಂ.196/2014

ಚಾಸಾ-3 ಪ್ರಾಸಾ-2

ಪ್ರಮಾಣಿಕೃತ ಹೇಳಿಕೆ ಸತ್ಯ ಪ್ರತಿಜ್ಞೆಯ ಮೇರೆಗೆ

ದಿನಾಂಕ ಃ 04.07.2017

| | | |
|---|---|---|
| ಹೆಸರು | ಃ | ಬಸವರಾಜ ಬಿರಾದಾರ |
| ತಂದೆಯ ಹೆಸರು | ಃ | ಶಿವರಾಯ |
| ವಯಸ್ಸು | ಃ | 45-ವರ್ಷ |
| ಉದ್ಯೋಗ | ಃ | ಮೇಲ್ವಿಚಾರಕ ವೇರಹೌಸ್ ರೇಣುಕಾ ಶುಗರ್ಸ |
| ವಾಸಸ್ಥಳ | ಃ | ದುದನಿ ಗ್ರಾಮ, ತಾ. ಅಕ್ಕಲಕೋಟ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ನನಗೆ ಆರೋಪಿತನ ಪರಿಚಯವಿರುವುದಿಲ್ಲ. 4-ವರ್ಷದ ಹಿಂದೆ ಪೋಲಿಸರು ರೇಣುಕಾ ಸಕ್ಕರೆ ಕಾರ್ಖಾನೆಗೆ ಬಂದಿದ್ದರು ಅಲ್ಲಿ ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯ ಮೇಲಿನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಘಟನಾ ಸ್ಥಳದ ಪಂಚನಾಮೆಯಾಗಿರುತ್ತದೆ. ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿ ಪೋಲಿಸರ ಮುಂದೆ ನೀಡಿರುವ ಹೇಳಿಕೆಯನ್ನು ಮತ್ತು ನ್ಯಾಯಾಲಯದ ಮುಂದೆ ನೀಡಿರುವ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಗಿದೆ.)

ಪಾಟೀ ಸವಾಲುಃ ಎಪಿಪಿ ಯವರಿಂದ

ದಿನಾಂಕ 18.12.2010 ರಂದು ಆರೋಪಿತರು ರೇಣುಕಾ ಸಕ್ಕರೆ ಪ್ಯಾಕ್ಟರಿಯಲ್ಲಿ ಸಕ್ಕರೆ ಚೀಲಗಳನ್ನು ಅನಧಿಕೃತವಾಗಿ ಗೋದಾಮಿಗೆ ಸಾಗಿಸದೇ ಬೇರೆ ಕಡೆ ಸಾಗಾಟ ಮಾಡುತ್ತಿದ್ದ ಬಗ್ಗೆ ಪ್ರಕರಣ ಅವರು ಮೇಲೆ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ಚಾಸಾ-1 ರವರು ಸದರಿ ಆರೋಪಿತನ ಹಾಗೂ ಇತರರ ವಿರುದ್ಧ ಹೇಳಿಕೆ ಪಿರ್ಯಾದಿ ನೀಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ದಿನಾಂಕ 23.12.2010 ರಂದು ಬೆಳಿಗ್ಗೆ 9 ರಿಂದ 10.30 ಗಂಟೆಯ ವರೆಗೆ ರೇಣುಕಾ ಸಕ್ಕರೆ ಕಾರ್ಖಾನೆಯಲ್ಲಿ ಚಾಸಾ-9 ರವರು ತೋರಿಸಿದ ಘಟನಾ ಸ್ಥಳದಲ್ಲಿ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಪೋಲಿಸರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದರೆ ಸದರಿ ದಿನ ಪೋಲಿಸರು ಶುಗರ್ ಪ್ಯಾಕ್ಟರಿಗೆ ಬಂದಿದ್ದು ನಮ್ಮ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಗೆ ನಾನು ಪಂಚನಾಮೆ ಮಾಡಿದ ನಂತರ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿಯೇ ಪಂಚನಾಮೆಗೆ ಸಹಿ ಮಾಡಿದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ : ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

ಪ್ರಥಮ ದರ್ಜೆಯ ನ್ಯಾಯಿಕ ದಂಡಾದಿಕಾರಿಗಳವರ ನ್ಯಾಯಾಲಯ
ಅಫಜಲಪೂರ

ಸಿಸಿ .ನಂ.196/2014

ಚಾಸಾ-6 ಪ್ರಾಸಾ-3

ಪ್ರಮಾಣಿಕೃತ ಹೇಳಿಕೆ ಸತ್ಯ ಪ್ರತಿಜ್ಞೆಯ ಮೇರೆಗೆ
ದಿನಾಂಕ : 04.07.2017

| | | |
|---|---|---|
| ಹೆಸರು | : | ಜಯಪ್ರಕಾಶ ಜಗತಾಪ |
| ತಂದೆಯ ಹೆಸರು | : | ದಗಡು |
| ವಯಸ್ಸು | : | 49-ವರ್ಷ |
| ಉದ್ಯೋಗ | : | ಗೋದಾಮು ಸಹಾಯಕ, ರೇಣುಕಾ ಶುಗರ್ಸ |
| ವಾಸಸ್ಥಳ | : | ಗೋಗಾಂವ, ತಾ. ಅಕ್ಕಲಕೋಟ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ನನಗೆ ಆರೋಪಿತನ ಹಾಗೂ ಚಾಸಾ-1 ರವರ ಪರಿಚಯವಿರುವುದಿಲ್ಲ. ನಾನು 11-ವರ್ಷದಿಂದ ರೇಣುಕಾ ಶುಗರ್ಸ ಹಾವಳಾಗದಲ್ಲಿ ಕತ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-1 ರವರು ಆರೋಪಿತನ ಮೇಲೆ ಯಾವ ಕಾರಣಕ್ಕೆ ಹೇಳಿಕೆ ಪಿರ್ಯಾದಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಘಟನೆ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

**(ಈ** ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿ ಪೋಲಿಸರ ಮುಂದೆ ನೀಡಿರುವ ಹೇಳಿಕೆಯನ್ನು ಮತ್ತು ನ್ಯಾಯಾಲಯದ ಮುಂದೆ ನೀಡಿರುವ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಗಿದೆ.**)**

ಪಾಟೀ ಸವಾಲುಃ ಎಪಿಪಿ ಯವರಿಂದ

ಚಾಸಾ-1 ರವರ ಸರಕು ಸಾಗಣೆ (ಟ್ರಾನ್ಸಪೋರ್ಟ) ವ್ಯಾಪಾರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರ ಕಡೆಯಿಂದ ಶುಗರ ಪ್ಯಾಕ್ಟರಿಗೆ ಬೇಕಾಗುವ ವಾಹನಗಳನ್ನು ಪ್ಯಾಕ್ಟರಿಯವರು ಬಾಡಿಗೆ ಪಡೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 18.12.2010 ರಂದು ಸಾಯಂಕಾಲ 4.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-7 ರವರು ಗೋದಾಮಿನ ಸ್ಟೋರ್ ಕೀಪರ್ ಎಂದು ಕರ್ತವ್ಯದಲ್ಲಿದ್ದೆವು ಎಂದರೆ ಸರಿ. ಆ ಸಮಯದಲ್ಲಿ ಒಂದು ಲಾರಿ ಅದರ ನೊಂದಣಿ ನಂ.ಕೆಎ-25/ಬಿ-2247 ನ್ನು ಒಬ್ಬ ವ್ಯಕ್ತಿ ನಡೆಸಿಕೊಂಡು ಬಂದಿರುತ್ತಾನೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಲಾರಿಗೆ 50 ಕೆಜಿ ತೂಕವುಳ್ಳ 640 ಸಕ್ಕರೆ ತುಂಬಿದ ಚೀಲಗಳನ್ನು ಲೋಡ ಮಾಡಿಸಿರುತ್ತೇವೆ ಎಂದರೆ ನನಗೆ ನೆನಪಿಲ್ಲ. ಸದರಿ ಲಾರಿ ಚಾಲಕನು ಖೊಟ್ಟಿ ಕಾಗದ ಪತ್ರಗಳನ್ನು ತೆಗೆದುಕೊಂಡು ಬಂದು ಸಕ್ಕರೆ ಚೀಲಗಳನ್ನು ಲೋಡ ಮಾಡಿಸಿಕೊಂಡು ಬೇರೆ ಕಡೆಗೆ ಸಾಗಾಟ ಮಾಡಿರುವ ಬಗ್ಗೆ ನನಗೆ ನಂತರದಲ್ಲಿ ತಿಳಿದಿರುತ್ತದೆ.

ಘಟನೆಯಾದ ನಂತರ ಸದರಿ ಲಾರಿ ಚಾಲಕನ ಭಾವಚಿತ್ರವನ್ನು ನನಗೆ ಪೋಲಿಸರು ತೋರಿಸಿದಾಗ ಅದನ್ನು ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಲಾರಿ ಚಾಲಕನು ಲಾರಿ ನಂಬರ ಬದಲಿಸಿ ಬಿಹಾರ ಮತ್ತು ಹುಬ್ಬಳ್ಳಿಯಲ್ಲಿ ಲಾರಿ ತೆಗೆದುಕೊಂಡು ಹೋಗಿ ರೇಣುಕಾ ಶುಗರ್ಸದಿಂದ ಒಯ್ದು ಸಕ್ಕರೆ ಚೀಲಗಳನ್ನು ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿಲ್ಲ. ಇದೇ ರೀತಿ ಇನ್ನೂ ಮೂರು ಲಾರಿಗಳು ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಪ್ಯಾಕ್ಟರಿಯಿಂದ ಸಕ್ಕರೆ ಚೀಲಗಳನ್ನು ಅಪ್ರಮಾಣಿಕವಾಗಿ ತೆಗೆದುಕೊಂಡು ಬೇರೆ ಬೇರೆ ಕಡೆ ಮಾರಾಟ ಮಾಡಿರುವ ಕುರಿತು ಆರೋಪಿತರ ವಿರುದ್ಧ ಪ್ರಕರಣ ದಾಖಲಾಗಿರುವ ವಿಷಯ ನನಗೆ ಗೊತ್ತಿಲ್ಲ. ಈ ಕುರಿತು ದಿನಾಂಕ 23.12.2011 ರಂದು ನಾನು ಈಗ ಓದಿ ಹೇಳಲಾದ ನಿಪಿ-2 ರಂತೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಎಲ್ಲಾ ಮಾಹಿತಿ ಇದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ

ಮರು ವಿಚಾರಣೆ ಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು

ಅಫಜಲಪೂರ

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾದಿಕಾರಿಗಳವರ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ .ನಂ.196/2014

ಚಾಸಾ-10 ಪ್ರಾಸಾ-4

ಪ್ರಮಾಣಿಕೃತ ಹೇಳಿಕೆ ಸತ್ಯ ಪ್ರತಿಜ್ಞೆಯ ಮೇರೆಗೆ
ದಿನಾಂಕ : 04.07.2017

| | | |
|---|---|---|
| ಹೆಸರು | : | ವಿಜಯಕುಮಾರ ಕುಂಬಾರ |
| ತಂದೆಯ ಹೆಸರು | : | ನಾಗಣ್ಣ |
| ವಯಸ್ಸು | : | 31-ವರ್ಷ |
| ಉದ್ಯೋಗ | : | ಸೆಕ್ಯೂರಿಟಿ ಗಾರ್ಡ |
| ವಾಸಸ್ಥಳ | : | ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ನನಗೆ ಆರೋಪಿತನ ಪರಿಚಯವಿರುವುದಿಲ್ಲ, ನಾನು 4-ವರ್ಷದಿಂದ (2009 ರಿಂದ 2012) ರೇಣುಕಾ ಶುಗರ್ಸ ಹಾವಳಾಗದಲ್ಲಿ ಸೆಕ್ಯುರಿಟಿ ಗಾರ್ಡ ಎಂದು ಕತ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ-1 ರವರು ಆರೋಪಿತನ ಮೇಲೆ ಯಾವ ಕಾರಣಕ್ಕೆ ಹೇಳಿಕೆ ಪಿರ್ಯಾದಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ, ಘಟನೆ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿ ಪೋಲಿಸರ ಮುಂದೆ ನೀಡಿರುವ ಹೇಳಿಕೆಯನ್ನು ಮತ್ತು ನ್ಯಾಯಾಲಯದ ಮುಂದೆ ನೀಡಿರುವ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿಯನ್ನು ನೀಡಲಾಗಿದೆ.)**

ಪಾಟೀ ಸವಾಲುಃ ಎಪಿಪಿ ಯವರಿಂದ

ಚಾಸಾ-1 ರವರ ಸರಕು ಸಾಗಣೆ (ಟ್ರಾನ್ಸಪೋರ್ಟ) ವ್ಯಾಪಾರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರ ಕಡೆಯಿಂದ ಶುಗರ ಫ್ಯಾಕ್ಟರಿಗೆ ಬೇಕಾಗುವ ವಾಹನಗಳನ್ನು ಫ್ಯಾಕ್ಟರಿಯವರು ಬಾಡಿಗೆ ಪಡೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 18.12.2010 ರಂದು ಸಾಯಂಕಾಲ 4.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-9 ರವರು ಫ್ಯಾಕ್ಟರಿಯ ಸೆಕ್ಯುರಿಟಿ ಗಾರ್ಡ ಎಂದು ಕರ್ತವ್ಯದಲ್ಲಿದ್ದೆವು ಎಂದರೆ ಸರಿ. ಅದೇ ದಿನ ರಾತ್ರಿ 11.45 ಗಂಟೆಗೆ ಒಂದು ಲಾರಿ ಅದರ ನೊಂದಣಿ ನಂ.ಕೆಎ-25/ಬಿ-2247 ಇದು ಸಕ್ಕರೆ ಚೀಲಗಳನ್ನು ತುಂಬಿಕೊಂಡು ಫ್ಯಾಕ್ಟರಿಯಿಂದ ಹೊರಗಡೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ಮುಖ್ಯ ದ್ವಾರದಲ್ಲಿ ಅದರ ಗೇಟ ಪಾಸ ನಂ.2482 ಮತ್ತು ಚಾಲಕನ ಹೆಸರು ರೇಣುಕಪ್ಪ ಆತನ ವಾಹನ ಚಾಲನಾ ಪರವಾನಿಗೆ ನಂ.135 ಎಂದು ರಜಿಸ್ಟರದಲ್ಲಿ ನಮೂದಿಸಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಲಾರಿ ಚಾಲಕನು ಸಕ್ಕರೆ ಚೀಲಗಳನ್ನು ತಲುಪಿಸಬೇಕಾದ ಸ್ಥಳಕ್ಕೆ ತೆಗೆದುಕೊಂಡು ಹೋಗದೆ ಲಾರಿಯ ನಂಬರ ಪ್ಲೇಟನ್ನು ಬದಲಾಯಿಸಿ ಮುದ್ದೆಬಿಹಾಳ ಮತ್ತು ಹುಬ್ಬಳ್ಳಿ ಕಡೆಗೆ ತೆಗೆದುಕೊಂಡು ಹೋದ ಬಗ್ಗೆ ನನಗೆ ನಂತರ ಗೊತ್ತಾಯಿತು ಎಂದರೆ ಸರಿಯಲ್ಲ. ಇದೇ ವಿಷಯವಾಗಿ ಚಾಸಾ-1 ರವರು ಪಿರ್ಯಾದಿ ಕೊಟ್ಟ ನಂತರ ಪೋಲಿಸರು ಸದರಿ ದಿನ ಲಾರಿ ಚಾಲಕನ ಮಾಹಿತಿಗಾಗಿ ಇಬ್ಬರು ವ್ಯಕ್ತಿಗಳ ಭಾವಚಿತ್ರಗಳನ್ನು ತೋರಿಸಿದಾಗ ನಾನು ಘಟನೆ ದಿವಸ ಲಾರಿ ಚಲಾಯಿಸುತ್ತಿದ್ದ ವ್ಯಕ್ತಿಯ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ.

ಇದೇ ರೀತಿ ಇನ್ನೂ ಮೂರು ಲಾರಿಗಳು ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಫ್ಯಾಕ್ಟರಿಯಿಂದ ಸಕ್ಕರೆ ಚೀಲಗಳನ್ನು ಅಪ್ರಮಾಣಿಕವಾಗಿ ತೆಗೆದುಕೊಂಡು ಬೇರೆ ಬೇರೆ ಕಡೆ ಮಾರಾಟ ಮಾಡಿರುವ ಕುರಿತು ಆರೋಪಿತರ ವಿರುದ್ಧ ಪ್ರಕರಣ ದಾಖಲಾಗಿರುವ ವಿಷಯ ನನಗೆ ಗೊತ್ತಿಲ್ಲ. ಈ ಕುರಿತು ದಿನಾಂಕ 23.12.2011 ರಂದು ನಾನು ಈಗ ಓದಿ ಹೇಳಲಾದ ನಿಪಿ-3 ರಂತೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಎಲ್ಲಾ ಮಾಹಿತಿ ಇದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.

ಮರು ವಿಚಾರಣೆ ಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ